**ಕರ್ನಾಟಕ ರಕ್ಷಣಾ ವೇದಿಕೆ**

# ದೆಹಲಿಯಲ್ಲಿ ಮೊಳಗಿದ ರಣಕಹಳೆ

ದೆಹಲಿ ಮುತ್ತಿಗೆಯ ವೀರ ಘೋಷಣೆಯೊಂದಿಗೆ ನಾಡಿನ ಸಾವಿರಾರು ಕನ್ನಡಿಗರು ದೆಹಲಿಯ ಬೀದಿ ಬೀದಿಗಳಲ್ಲಿ ಇಂದು ನಡೆಸಿದ ಜಾಥಾ ಕನ್ನಡಿಗನ ಸಹನೆ ಮುಗಿದು ಹೋಗಿರುವುದನ್ನು ದೆಹಲಿಯ ದೊರೆಗಳಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಯಿತು. ಕೃಷ್ಣಾ ಕಾವೇರಿ ಹೋರಾಟ ಸಮನ್ವಯ ಸಮಿತಿಯ ಅಡಿಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಮುಂದಾಳತ್ವದಲ್ಲಿ ನಡೆದ ಈ ಜಾಥಾ ದೆಹಲಿಯ ಬಿರ್ಲಾ ಮಂದಿರದಿಂದ ಆರಂಭವಾಗಿ ಜಂತರ್ ಮಂತರ್ ತಲುಪಿತು. ಮೆರವಣಿಗೆ ಮೈಲಿಗಿಂತಲೂ ದೊಡ್ಡದಾಗಿತ್ತು. ನಂತರ ಆರಂಭವಾದ ಧರಣಿಯಲ್ಲಿ ಹಲವಾರು ಸಂಘಟನೆಗಳ ನಾಯಕರುಗಳು ಮಾತನ್ನಾಡಿದರು. ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಶ್ರೀ ಟಿ.ಎ.ನಾರಾಯಣಗೌಡರು ಪ್ರಧಾನಮಂತ್ರಿಗಳಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ಬಂದು ಕನ್ನಡಿಗರ ಅಹವಾಲನ್ನು ಆಲಿಸಬೇಕೆಂದು ಒತ್ತಾಯಿಸಿ ಕರೆ ಇತ್ತರು. ಇದಕ್ಕೆ ಸರಿಯಾದ ಸ್ಪಂದನೆ ದೊರೆಯದೇ ಹೋದಾಗ ಅಲ್ಲಿ ನೆರೆದಿದ್ದ ೨೦,೦೦೦ಕ್ಕೂ ಹೆಚ್ಚಿನ ಕನ್ನಡಿಗರು ಸಂಸತ್ ಭವನಕ್ಕೇ ಮುತ್ತಿಗೆ ಹಾಕಲು ಮುಂದಾದರು. ಈ ಪ್ರಯತ್ನದಲ್ಲಿ ಅಷ್ಟೂ ಜನರನ್ನು ಬಂಧಿಸಲಾಯಿತು. ನೆರೆದಿದ್ದ ಕನ್ನಡಿಗರನ್ನು ಉದ್ದೇಶಿಸಿ ಮಾತನಾಡಿದ ಶ್ರೀ ನಾರಾಯಣ ಗೌಡರು, ನಾವು ಇಲ್ಲಿಗೆ ಪ್ರಚಾರಕ್ಕಾಗಿ ಬಂದಿಲ್ಲ. ಇಲ್ಲಿ ಬಂದಿರುವವರೆಲ್ಲಾ ಕಾವೇರಿಗಾಗಿ ಪ್ರಾಣ ತ್ಯಾಗಕ್ಕೂ ಸಿದ್ಧವಾಗಿರುವ ಹೋರಾಟಗಾರರು. ಜೈಲು ವಾಸ, ಲಾಠೀ ಏಟು, ಬೂಟಿನೇಟುಗಳು ಹೊಸದಲ್ಲ ಮತ್ತು ಅವಕ್ಕೆ ನಮ್ಮನ್ನು ಬಗ್ಗಿಸುವ, ಸದೆ ಬಡಿವ ಶಕ್ತಿಯೂ ಇಲ್ಲ. ನಮ್ಮ ಹೋರಾಟ ಇವತ್ತು ಒಂದು ದಿನದ್ದು ಅಂತ ದೆಹಲಿ ಪೊಲೀಸರು ಭಾವಿಸಿರಬಹುದು. ಆದರೆ ನಾವು ನಮಗೆ ನ್ಯಾಯದ ಭರವಸೆ ಸಿಗುವ ತನಕ ಮರಳುವವರಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ ಕನ್ನಡಿಗರ ಮೇಲೆ ಹೀಗೆ ಅನ್ಯಾಯವನ್ನು ನಿರಂತರವಾಗಿ ನಡೆಸುತ್ತಲೇ ಬಂದದ್ದಾದರೆ ಈ ಒಕ್ಕೂಟ ವ್ಯವಸ್ಥೆಯ ಅಗತ್ಯ ಕನ್ನಡಿಗರಿಗಿಲ್ಲ. ನಮ್ಮದೆಲ್ಲವನ್ನು ಬಲಿಕೊಡುತ್ತಾ ಈ ಒಕ್ಕೂಟ ನಮ್ಮ ಮೇಲೆ ಎಸಗುವ ಎಲ್ಲ ಅನ್ಯಾಯಗಳನ್ನು, ಮಲತಾಯಿ ಧೋರಣೆಗಳನ್ನು ಸಹಿಸುತ್ತಾ ನಮ್ಮ ಜನರ ಬದುಕನ್ನು ಬಲಿಕೊಟ್ಟಾದರೂ ಇದರೊಳಗೆ ಇರಬೇಕೆನ್ನುವ ಹಠ ನಮಗಿಲ್ಲ, ಈಗಲೂ ಈ ಅನ್ಯಾಯಗಳನ್ನು ಸರಿಪಡಿಸದಿದ್ದಲ್ಲಿ ಕರ್ನಾಟಕ ಈ ಪೊಳ್ಳು ರಾಷ್ಟ್ರೀಯತೆಯ ಸುಳ್ಳು ಒಕ್ಕೂಟ ವ್ಯವಸ್ಥೆಯಿಂದ ಹೊರಬರಬೇಕಾದೀತು. ನಮ್ಮ ಶಾಂತಿಯುತ ಪ್ರತಿಭಟನೆಗಳಿಗೆ ಸೂಕ್ತವಾಗಿ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಅಂಚೆ, ರೈಲು, ಆದಾಯ ತೆರಿಗೆ ಸೇರಿದಂತೆ ಕೇಂದ್ರ ಸರ್ಕಾರದ ಯಾವ ಕಛೇರಿಗಳೂ ಕೆಲಸ ಮಾಡದಂತೆ ಚಳವಳಿ ನಡೆಸಲಾಗುವುದು, ಕೇಂದ್ರದ ವಿರುದ್ಧ ಕನ್ನಡಿಗರ ಕ್ರಾಂತಿಯ ಹೋರಾಟ ಆರಂಭವಾಗುವ ಮುನ್ನ ಸಂಬಂಧ ಪಟ್ಟವರು ಎಚ್ಚೆತ್ತುಕೊಂಡು ನಮಗೆ ನ್ಯಾಯ ದೊರಕಿಸಿಕೊಡಬೇಕು ಎಂದು ನುಡಿದರು. ಸಭೆಯಲ್ಲಿ ಭಾಗವಹಿಸಿದ್ದ ಕನ್ನಡ ಚಿತ್ರರಂಗದ ಪ್ರಖ್ಯಾತ ಸಂಗೀತ ನಿರ್ದೇಶಕರಾದ ಶ್ರೀ ಹಂಸಲೇಖ ಅವರು ಚಲನ ಚಿತ್ರರಂಗದ ನಟ–ನಟಿಯರು ಇನ್ನೂ ಹೋರಾಟಕ್ಕೆ ಧುಮುಕದಿರುವುದನ್ನು ಪ್ರಸ್ತಾಪಿಸುತ್ತಾ ಇದುವರೆಗೆ ಈ ಅಯೋಗ್ಯರಿಗಾಗಿ ಹತ್ತಾರು ಕನ್ನಡ ನಾಡು ನುಡಿಗಳ ಗೀತೆಗಳನ್ನು ಬರೆದುಕೊಟ್ಟೆ, ಇನ್ನುಮುಂದೆ ಆ ತಪ್ಪು ಮಾಡುವುದಿಲ್ಲ ಎಂದು ನುಡಿದರು.

ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಅಧ್ಯಕ್ಷರು ಈ ಸಭೆಯಲ್ಲಿ ಪಾಲ್ಗೊಂಡು ಕನ್ನಡಿಗರ ಈ ಹೋರಾಟ ನ್ಯಾಯಯುತವಾಗಿದ್ದು ಇದನ್ನು ದೇಶದ ಎಲ್ಲ ರೈತ ಬಾಂಧವರೂ ಬೆಂಬಲಿಸುವುದಾಗಿ ಘೋಷಿಸಿದರು. ಸಂಸದರಾದ ಶ್ರೀ ಶಿವಣ್ಣನವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.ಪ್ರತಿಭಟನೆಗಳು ನಾಳೆಯೂ ಮುಂದುವರೆಯಲಿದ್ದು ದೆಹಲಿಯಲ್ಲಿ ಬೀಡು ಬಿಟ್ಟಿರುವ ಹೋರಾಟಗಾರರು ಕೇಂದ್ರ ಸರ್ಕಾರದ ಕಣ್ಣು, ಬಾಯಿಗಳನ್ನು ತೆಗೆಸೇ ಬರಬೇಕೆಂದು ತೀರ್ಮಾನಿಸಿದ್ದಾರೆ.